**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**

**MVC 79-24** **RW-2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 17.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರ ಪರ ಶ್ರೀಮತಿ S R G, ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು, ಅದಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

ಪಾಲಿಸಿ ಪ್ರತಿಯನ್ನು ನಿಆರ್ - 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರ ಪರ P R B, ವಕೀಲರಿಂದಃ**

ನಾನು ಮುಖ್ಯ ವಿಚಾರಣೆಗೆ ಮಾಹಿತಿ ನೀಡಿದ್ದೇನೆ. ಅಪಘಾತ ವು ದಿಃ 3.12.2023 ಸಂಜೆಃ 4 ಗಂಟೆಗೆ ಅಂದರೆ ಸರಿ. ನಿಆರ್ -3 ಅಪಘಾತ ವಾದ ನಂತರ ಮಾಡಿಸಿದ ಪಾಲಿಸಿ ಅಂದರೆ ಸರಿ. ಇದಕ್ಕಿಂತ ಪೂರ್ವದಲ್ಲಿ ಐ ಸಿ ಐ ಸಿ ಐ ಲೊಂಬೋರ್ಡ-2 ನೇ ಎದುರುದಾರ ಕಂಪನಿಯಲ್ಲಿ ವಿಮೆ ಚಾಲ್ತಿಯಲ್ಲಿತ್ತು ಅಂದರೆ ಗೊತ್ತಿಲ್ಲ. ಒಂದು ವಾಹನಕ್ಕೆ ಎಲ್ಲಿಯಾದರೂ ಹಾಗೂ ಎಷ್ಟು ಬಾರಿಯಾದರೂ ವಿಮೆ ಮಾಡಿಸಬಹುದು ಅಂದರೆ ಗೊತ್ತಿಲ್ಲ. ಯಾವುದಾದರೂ ವಿಮೆ ಚಾಲ್ತಿಯಲ್ಲಿದ್ದರೆ ತಂದುಕೊಟ್ಟರೆ ಗೊತ್ತಾಗುತ್ತದೆ. ಒಂದು ಕಂಪನಿಯಲ್ಲಿ ವಿಮೆ ಚಾಲ್ತಿಯಲ್ಲಿದ್ದರೆ, ಮತ್ತೊಂದು ಕಂಪನಿಯಲ್ಲಿ ವಿಮೆ ಮಾಡಿಸುವಾಗ ಅದರ ಪ್ರತಿ ತಂದುಕೊಟ್ಟರೆ ಗೊತ್ತಾಗುತ್ತದೆ, ಇಲ್ಲವಾದರೆ ಇಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.